ದಿನಾಂಕಃ 06.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ ಎನ್ ಪಿ ವಕೀಲರಿಂದಃ-

ನನಗೆ ಈ ಕೇಸಿನ ಬಗ್ಗೆ ಗೊತ್ತಿದೆ. ನಮ್ಮ ಮನೆ ಹಿಂದೆ ಘಟನೆಯಾಗಿದೆ. ಆರೋಪಿತರು ನಮ್ಮ ಮನೆ ಒಳಗೆ ಬಂದು ಹೊಡೆದಿದ್ದಾರೆಂದು ಪೊಲೀಸರ ಮುಂದೆ ಹೇಳಿಲ್ಲ ಆದರೆ ಸಾಕ್ಷಿ ಮನೆ ಬಾಜು ಬಂದು ಹೊಡೆದಿದ್ದಾರೆಂದು ಸ್ವತಃ ಹೇಳುತ್ತಾರೆ. ಅಂದರೆ ನಮ್ಮ ಮತ್ತು ಅಪ್ಪಣ್ಣನ ಮನೆ ಮಧ್ಯ ಇರುವ ಖುಲ್ಲಾ ಜಾಗೆಯಲ್ಲಿ ಹೊಡೆದಿರುತ್ತಾರೆ. ನಮ್ಮ ಮನೆ ಮುಂದೆ ಬಾಂಡೆ ತೊಳೆಯುತ್ತೇವೆ. ಅಲ್ಲಿ ಆರೋಪಿತರು ಬಂದು ಹೊಡೆಬಡೆ ಮಾಡಿಲ್ಲ. ಆಗ ಚಾಸಾ 7 ನಮ್ಮ ಮನೆ ಮುಂದೆ ಬಾಂಡೆ ತೊಳೆಯುತ್ತಿದ್ದಳು. ಅಲ್ಲಿ ಆರೋಪಿತರು ಬಂದು ಹೊಡೆಬಡೆ ಮಾಡಿಲ್ಲ. ನನ್ನ ಗಂಡನ ತಲೆಗೆ, ಕಾಲಿಗೆ ಪೆಟ್ಟಾಗಿ ರಕ್ತಗಾಯವಾಗಿತ್ತು. ಬಾಯಿ, ಮೂಗು ಮತು ಕಿವಿಯಿಂದ ರಕ್ತ ಬರುತ್ತಿತ್ತು. ಅದರಿಂದ ಅವರು ಆ ಖುಲ್ಲಾ ಜಾಗೆಯಲ್ಲಿ ಬಿದ್ದರು. ಆ ಜಾಗದಲ್ಲಿ ರಕ್ತ ಬಿದ್ದಿತ್ತು. ಪೋಲಿಸರು ಬಂದಾಗ ನಾನು ಅಲ್ಲಿರಲಿಲ್ಲ. ರಕ್ತಬಿದ್ದಿರುವುದನ್ನು ಚಾಸಾ 7 ನೋಡಿದ್ದಾರೆ. ನಾನು ಸರ್ಕಾರಿ ದವಾಖಾನೆಗೆ ಹೋದಾಗ ಮಧ್ಯಾಹ್ನ 12 ಗಂಟೆಯಾಗಿತ್ತು. ನಾನು ಮತ್ತು ಗಂಗವ್ವಾ ಆಸ್ಪತ್ರೆಗೆ ಹೋಗಿದ್ದೇವು. ಚಾಸಾ 1 ರಿಗೆ ಸೊಂಟಕ್ಕೆ ಪೆಟ್ಟಾಗಿತ್ತು. ಚಾಸಾ 7 ರ ಕೈಗೆ

ಪೆಟ್ಟಾಗಿತ್ತು. ನಾನು ಬೆಳಗಾವಿ ದವಾಖಾನೆಯಲ್ಲಿ ಒಂದು ದಿನ ಅಡಮಿಟ ಇದ್ದೆ. ಮರುದಿನ ನಾನುಮನೆಗೆ ಬಂದಾಗ ಪೋಲಿಸರು ಬೆಳಗ್ಗೆ ಬೇಟಿಯಾದರು. ನಾನು ಘಟನೆ ಬಗ್ಗೆ ಅವರಿಗೆ ಹೇಳಿದೆ.

2) ಆಗ ನಾನು ನನ್ನ ಮೊಮ್ಮಗನಿಗೆ ಯಾಕೆ ಹೊಡೆದಿರಿ ಎಂದು ಕೇಳಿದಾಗ ನೀವು ಉಳಕೊಂಡಿರಿ ಈಗ ಐತಿ ಬರ್ರಿ ಎಂದು ಹೇಳಿ ನಮ್ಮ ಮನೆಗೆ ಬಂದು ಬಡಿಗೆ, ಕಲ್ಲು ತಗೊಂಡು ಬಂದು ಕಲ್ಲಿನಿಂದ ಹೊಡೆಯಲು ಶುರು ಮಾಡಿದರು ಎಂದು ಪೋಲಿಸರ ಮುಂದೆ ಹೇಳಿಲ್ಲ ಅನ್ನುವದು ನಿಜ. ಆಗ ನಾನು ಕುಡಿಸಲು ನೀರು ತರಲು ಹೋದಾಗ ನನಗೂ ಸಹ 8 ನೇ ಆರೋಪಿ ಬಡಿಗೆಯಿಂದ ಕೈ ಮೇಲೆ ಹೊಡೆದಿದ್ದರಿಂದ ನೀರಿನ ತಂಬಿಗೆ ಕೆಳಗೆ ಬಿತ್ತು ಎಂದು ಪೋಲಿಸರಿಗೆ ನಾನು ಹೇಳಿಲ್ಲ ಅನ್ನುವದು ನಿಜ. ನಂತರ ಆರೋಪಿತರು ನಮ್ಮ ಮನೆ ಬಾಗಿಲು ಮುರಿಯಲು ಪ್ರಯತ್ನ ಮಾಡಿದರು. 1 ನೇ ಆರೋಪಿ ನಮ್ಮ ಮನೆಯ ಮುಂದಿನ ಬಾಗಿಲನ್ನು ಮುರಿದರು ಎಂದು ಪೋಲಿಸರ ಮುಂದೆ ಹೇಳಿಲ್ಲ ಅನ್ನುವುದು ಸರಿಯಲ್ಲ. ನಾನು ಹೇಳಿದಂತೆ ಯಾವದೇ ಘಟನೆಯಾಗದಿದ್ದರೂ ಚಾಸಾ 1 ಮತ್ತು ನನ್ನ ಮಕ್ಕಳ ಮತ್ತು ಮಗಳ ಮಾತು ಕೇಳಿಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಅನ್ನುವುದು ಸರಿಯಲ್ಲ.

**SC 107/2016 PW.5**

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ  ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ
ಮಾಡಲಾಯಿತು.)

(ಸಾಕ್ಷಿಗೆ ಓ ಹೇ ಕೆ ಸರಿ ಇದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು ಚಿಕ್ಕೋಡಿ.